# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/20/2015-16 ದಿನಾಂಕ: 8.05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ನಕ್ರಾಳ್ ಗಂಗಮ್ಮ ಗಂಡ ಲೇಟ್ ಕೋರಪ್ಪ ವಾಸ ನಾರಾಯಣದೇವರ ಕೆರೆ ಗ್ರಾಮ ಹ.ಬೊ.ಹಳ್ಳಿ ತಾ. | ಕಂದಾಯ ನಿರೀಕ್ಷಕರು ತಂಬ್ರಹಳ್ಳಿ |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಮರಬ್ಬಿಹಾಳ್ | 13/ಬಿ3 | 3.00 |

*****

**ಪೀಠಿಕೆ:-**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಮರಬ್ಬಿಹಾಳ್ ಗ್ರಾಮದ ಸ.ನಂ. 13/ಬಿ3 ವಿಸ್ತೀರ್ಣ 3.00 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.19/2015-16 ರಲ್ಲಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಮನವಿದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:29.10.2015ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ನಕ್ರಾಳ್ ಕೋರಪ್ಪ ಇವರ ಜಮೀನಾಗಿದ್ದು ಸದರಿಯವರು ದಿನಾಂಕ:06.05.2001 ರಂದು ಮರಣ ಹೊಂದಿದ್ದು ವಂಶವೃಕ್ಷದ ಪ್ರಕಾರ ಸದರಿಯವರ ಏಕೈಕ ಹೆಂಡತಿಯಾದ ನಕ್ರಾಳ್ ಗಂಗಮ್ಮ ಇವರು ನೇರ ವಾರಸದಾರರಾಗಿರವುದರಿಂದ ಪೋತಿ ವಾರಸತ್ವದ ಪ್ರಕಾರ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಸದರಿ ಮನವಿದಾರರಾದ ವಾದಿಗಳು ಹಕ್ಕುಬದಲಾವಣೆಗಾಗಿ ಅಗತ್ಯ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಪ್ರಕರಣವು ವಿವಾದಾಸ್ಪದವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ.

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಮಗನಾದ ಶ್ರೀ ನಕ್ರಾಳ್ ರಾಘವೇಂದ್ರ ತಂದೆ ಲೇಟ್ ಕೋರಪ್ಪ ಇವರು ತನ್ನ ತಂದೆಯವರ ಮರಣ ದಿನಾಂಕ ಮತ್ತು ಸ್ಥಳ ದಾಖಲಾಗದೇ ಇರುವುದರಿಂದ ಮಾನ್ಯ ಸಿವಿಲ್ ನ್ಯಾಯಾದೀಶರು ಜೆ.ಎಂ.ಎಫ್.ಸಿ ನ್ಯಾಯಾಲಯ ಹಗರಿಬೊಮ್ಮನಹಳ್ಳಿ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ Cri Mis No. 204/2015 ರ ಮೂಲಕ ದಾವೆ ಹೂಡಿದ್ದು-

ಮಾನ್ಯ ನ್ಯಾಯಾಲಯವು ದಿ. ಕೋರಪ್ಪ ಇವರು ದಿನಾಂಕ:06.05.2001 ರಂದು ಮರಣಹೊಂದಿದ್ದು ಸದರಿ ಮರಣ ದಿನಾಂಕ ಮತ್ತು ಮರಣ ಸ್ಥಳವನ್ನು ನೊಂದಾಯಿಸಿಕೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ, ಅದರಂತೆ ವಾದಿಗಳು ಮರಣ ಪ್ರಮಾಣ ಪತ್ರವನ್ನು ಪಡೆದು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರತ್ತಾರೆ.

ವಾದಿಗಳು ಮಂಡಿಸಿದ ವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನು ಪಹಣಿ ಪತ್ರಿಕೆಯ ಪ್ರಕಾರ ಕೋರಪ್ಪ ಇವರ ಜಮೀನಾಗಿದ್ದು ಹಾಗೂ ಕೋರಪ್ಪ ಇವರ ಮರಣ ಪ್ರಮಾಣ ಪತ್ರ ಮತ್ತು ವಂಶವೃಕ್ಷ ಪ್ರಮಾಣ ಪತ್ರದ ಪ್ರಕಾರ ವಾದಿಗಳು ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ದಿ.ನಕ್ರಾಳ್ ಕೋರಪ್ಪ ಇವರ ಹೆಂಡತಿಯಾಗಿದ್ದು ಸದರಿಯವರೇ ನೇರ ವಾರಸುದಾರರಾಗಿರುವುದು ಕಂಡುಬಂದಿರುತ್ತದೆ ಹಾಗೂ ಪ್ರಸ್ತುತ ವ್ಯಾಜ್ಯದ ಜಮೀನನ್ನು ಪೋತಿ ವಾರಸತ್ವದ ಪ್ರಕಾರ ಮೂಲ ಪಟ್ಟಾದಾರರ ಹೆಂಡತಿಯಾದ ವಾದಿಗಳ ಹೆಸರಿಗೆ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ, ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಮರಬ್ಬಿಹಾಳ್ ಗ್ರಾಮದ ಸ.ನಂ. 13/ಬಿ3 ವಿಸ್ತೀರ್ಣ 3.00 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ದಿ.ಕೋರಪ್ಪ ಇವರು ದಿನಾಂಕ:06.05.2001 ರಂದು ಮರಣ ಹೊಂದಿರುವುದರಿಂದ ಸದರಿಯವರ ಹೆಂಡತಿಯಾದ ಶ್ರೀಮತಿ ನಕ್ರಾಳ್ ಗಂಗಮ್ಮ ಗಂಡ ಲೇಟ್ ಕೋರಪ್ಪ ಇವರ ಹೆಸರಿಗೆ ಪೋತಿ ವಾರಸ ಪ್ರಕಾರ ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 05.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

05/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

ಉಪ ತಹಶೀಲ್ದಾರ್
ನಾಡ ಕಚೇರಿ ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

06/05/16